ವಿಶ್ವವಾಣಿ

ಸಂಪಾದಕೀಯ

ಮಾದಕ ವಸ್ತುವಿನಿಂದ ಮಕ್ಕಳನ್ನು ರಕ್ಷಿಸಿ

ದೇಶದಲ್ಲಿ 60 ದಶಲಕ್ಷಕ್ಕೂ ಹೆಚ್ಚು ಮಾದಕ ವ್ಯಸನಿಗಳಿದ್ದಾರೆ, ಅದರಲ್ಲಿ ಹೆಚ್ಚಿನವರು 10-17 ವರ್ಷ ವಯಸ್ಸಿನವರಾಗಿದ್ದಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ. ನಿಜಕ್ಕೂ ಇದು ಆತಂಕಕಾರಿ ವಿಷಯ. ಯೌವನಕ್ಕೆ ಕಾಲಿಡುವ ಮುನ್ನವೇ ಲಕ್ಷಾಂತರ ಬಾಲಕರು ಮಾದಕ ವ್ಯಸನಗಳಿಗೆ ತುತ್ತಾಗಿ ತಮ್ಮ ಜೀವನ ಹಾಳುಮಾಡಿಕೊಳ್ಳುವುದಲ್ಲದೆ ಕಟುಂಬಕ್ಕೂ ನಷ್ಟ ಉಂಟು ಮಾಡುತ್ತಿದ್ದಾರೆ. ಮಾದಕ ವಸ್ತು ಪಿಡುಗು ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿನಲ್ಲೇ ಹರಡಿದೆ. ವಿಶ್ವದಾದ್ಯಂತ ಈ ದುಶ್ಚಟಗಳಿಗೆ ಮಕ್ಕಳು ಮತ್ತು ಯುವಕರೇ ಹೆಚ್ಚು ಬಲಿಯಾಗುತ್ತಿದ್ದಾರೆ ಎಂಬುದು ಕಳವಳದ ಸಂಗತಿ. ಮಾದಕ ವಸ್ತುಗಳ ಮಾರಾಟ ಹಾಗೂ ಸಾಗಾಣೆ ಕಾನೂನು ಬಾಹಿರ ಎಂದು ಗೊತ್ತಿದ್ದರೂ ಇದರ ದಂಧೆ ಎಗ್ಗಿಲ್ಲದೆ ನಡೆಯುತ್ತಿದೆ. ಡ್ರಗ್ ಮಾಫಿಯಾ ಹತೋಟಿಗೆ ತರಲು ವಿಶ್ವದೆಲ್ಲೆಡೆ ಕಾನೂನು ಪ್ರಯತ್ನಗಳು ನಡೆಯುತ್ತಿವೆ. ಆದರೆ ಇದನ್ನು ಬುಡಸಮೇತ ಕಿತ್ತು ಹಾಕಲು ಸಾಧ್ಯವಾಗುತ್ತಿಲ್ಲ. ಈ ಪಿಡುಗನ್ನು ನಿಯಂತ್ರಿಸುವುದು ಸರಕಾರ ಮತ್ತು ಪೊಲೀಸರಿಂದ ಮಾತ್ರ ಸಾಧ್ಯವಿಲ್ಲ. ಪ್ರತಿಯೊಬ್ಬ ನಾಗರಿಕನೂ ಈ ಬಗ್ಗೆ ಜಾಗೃತಿ ಹೊಂದಿ ವಿಶ್ವವನ್ನು ಮಾದಕವಸ್ತುಗಳಿಂದ ಮುಕ್ತವಾಗಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಮಾದಕ ವಸ್ತುಗಳನ್ನು ಮಕ್ಕಳು ಬಳಸದಂತೆ ಕ್ರಮ ಕೈಗೊಳ್ಳಬೇಕಾದರೆ, ವಿವಿಧ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆಗೊಳಿಸಿ ಶಾಲಾ, ಕಾಲೇಜು ಮತ್ತು ಶೈಕ್ಷಣಿಕ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳ ಮಾರಾಟ ನಿಷೇಧಿಸಬೇಕು. ಮಾದಕ ವ್ಯಸನಿ ಮಕ್ಕಳ ಚಿಕಿತ್ಸೆ, ಪುನರ್ವಸತಿಗಾಗಿ ಜಾರಿಯಲ್ಲಿರುವ ವಿವಿಧ ಯೋಜನೆ, ಕಾರ್ಯಕ್ರಮಗಳ ಮತ್ತು ನೀತಿಗಳನ್ನು ಸೇವೆಯಡಿಯಲ್ಲಿ ತರಬೇಕು. ಮಾದಕ ವಸ್ತುಗಳು ಮತ್ತು ಅಕ್ರಮ ಮಾರಾಟ ನಿಷೇಧಕ್ಕಾಗಿ ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳಿಗೆ ಅವರ ಕರ್ತವ್ಯ, ಪಾತ್ರ, ಜವಾಬ್ದಾರಿಗಳ ಬಗ್ಗೆ ಮನವರಿಕೆ ಮಾಡಬೇಕು. ಶೈಕ್ಷಣಿಕ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮತ್ತು ಔಷಧ ಅಂಗಡಿಗಳಲ್ಲಿ ಮಕ್ಕಳಿಗೆ ಮಾದಕ ವಸ್ತುಗಳು ಲಭ್ಯವಾಗದಂತೆ ಕಣ್ಗಾವಲು ಹಾಕಬೇಕು. ಮಕ್ಕಳಿಗೆ ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಣಿಕೆ ನಿಷೇಧಕ್ಕಾಗಿ ವಿವಿಧ ಕಾನೂನುಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಬಲಪಡಿಸುವುದರ ಜತೆಗೆ ಅವುಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಮಾದಕ ವಸ್ತು ಪಿಡುಗು ಅಳಿಸಿ ಹಾಕಬಹುದು.

ಸೊಂಪಾದಕೀಯ

ಡಿಗ್ರಿ ಬೇರೆ, ಕೋರ್ಸ್ ಬೇರೆ !!

ಇಲ್ಲಿಂದ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಂತೂ ಸಿಕ್ಕಾಪಟ್ಟೆ ಕ್ರಾಂತಿ ಆಗುತ್ತಿದೆ. ಹಳೆಯ ಕಾಲದಲ್ಲಿ ಸ್ಕೂಲು, ಕಾಲೇಜಿಗೆ ಹೋದೆ, ಬಂದೆ, ಪರೀಕ್ಷೆ ಬರೆದೆ ಪಾಸಾದೆ, ಇಷ್ಟಕ್ಕೆ ಸೀಮಿತವಾಗಿದ್ದ ವಿದ್ಯಾಭ್ಯಾಸ ಈಗ ಬೇರೆಯದ್ದೇ ಹಂತ ತಲುಪಿದೆ. ಈಗ ಶಾಲೆಗಳು ಸಾಕಾಗುತ್ತಿಲ್ಲ, ಟ್ಯೂಷನ್‌ಗಳು ಬೇಕಾಗಿವೆ. ಹಾಗೆಯೇ ಈಗ ಡಿಗ್ರಿಗಳು ಸಾಕಾಗ್ತಾ ಇಲ್ಲ, ಹೊಸ ಕೋರ್ಸ್ ಗಳನ್ನು ಕಲಿಯಬೇಕಿದೆ. ಹಾಗಾಗಿಯೇ ಇಂದು ದೇಶದಲ್ಲಿ ಗಲ್ಲಿಗೊಂದು ಕೋಚಿಂಗ್ ಸೆಂಟರ್‌ಗಳು ಕಾಣಬರುತ್ತವೆ. ಇನ್ನು ಆನ್ ಲೈನ್ ನಲ್ಲೂ ಕೋರ್ಸ್‌ಗಳದ್ದೇ ಕಾರುಬಾರು. ವಿದ್ಯಾರ್ಥಿಗಳು ಇಂದು ಹೆಚ್ಚು ನಂಬಿಕೊಂಡಿರೋದು ಈ ಕೋಚಿಂಗ್ ಕ್ಲಾಸ್ ಗಳನ್ನೇ. ಶಾಲೆ ಕಾಲೇಜುಗಳೇ ನಿದ್ದರೂ ಕೇವಲ ಪರೀಕ್ಷೆ ಬರೆಯೋ ಸೆಂಟರ್‌ಗಳಾಗಿವೆ. ಈಗ ಎಲ್ಲರೂ ಮುಕ್ತವಾಗಿ, ಕೆಲಸ ಸಿಗಬೇಕು ಅಂದ್ರೆ ಡಿಗ್ರಿ ಮಾಡಿದ್ರೆ ಸಾಲಲ್ಲ, ಜಾಬ್ ಓರಿಯೆಂಟೆಡ್ ಕೋರ್ಸ್ ಮಾಡಬೇಕು ಅಂತಿದ್ದಾರೆ. ಇದರ ಅರ್ಥ ಏನು ಹಾಗಾದರೆ? ನಮ್ಮ ಶಾಲಾ ಕಾಲೇಜುಗಳಲ್ಲಿ ಕೆಲಸ ಸಿಗೋಕೆ ಬೇಕಾದಂಥ ಶಿಕ್ಷಣ ಸಿಕ್ತಾ ಇಲ್ಲ ಅಂತ ತಾನೇ. ಇದು ಶಿಕ್ಷಣ ವ್ಯವಸ್ಥೆಯ ದೋಷ ತಾನೇ. ಸರಿ, ಜ್ಞಾನಾರ್ಜನೆಗಾಗಿ ಓದು ಬೇಕು, ಆದರೆ ಆ ಓದಿನಿಂದ ಬದುಕು ಕಟ್ಟಿಕೊಳ್ಳೋಕೂ ಸಾಧ್ಯ ಆಗಬೇಕು. ಜೀವನದಲ್ಲಿ ಎಂದೂ ಉಪಯೋಗಕ್ಕೆ ಬಾರದ ಪೈಥಾಗರಸ್ ಥೀರಂ, ಟ್ರಿಗ್ನಾಮೆಟ್ರಿಯಂಥ ವಿಷಯಗಳನ್ನು ಕಲಿಸೋದ್ರಿಂದ ವಿದ್ಯಾರ್ಥಿಗಳಿಗೆ ಯಾವ ಲಾಭ ಆಗುತ್ತಿದೆ ಅಂತ ಯೋಚಿಸಬೇಕಾದ ಸಮಯ ಇದು. ಕೆಲವು ಶಾಲೆ, ಕಾಲೇಜುಗಳಂತೂ ಕೇವಲ ನಾಮ್ ಕೇ ವಾಸ್ತೇ ಆಗಿಬಿಟ್ಟಿವೆ. ನೀವು ನಂಬ್ತೀರೋ ಇಲ್ವೋ, ವಾರಕ್ಕೆ ಕೇವಲ ಎರಡು ದಿನ ಅಟೆಂಡ್ ಆದ್ರೆ ಸಾಕು, ಅಟೆಂಡೆನ್ಸ್ ಕೊಡ್ತೀವಿ, ಪರೀಕ್ಷೆ ಬರೆಯೋಕೆ ಅವಕಾಶ ಕೊಡ್ತೀವಿ ಅನ್ನೋ ಶಾಲೆಗಳೂ ಇವೆ ನಮ್ಮಲ್ಲಿ. ಅಲ್ಲಿ ಅಡ್ಮಿಟ್ ಆಗೋ ಮಕ್ಕಳು ನಿಜವಾದ ಕಲಿಕೆಗೆ ಕೋಚಿಂಗ್ ಸೆಂಟರ್ ಗಳಿಗೆ ಹೋಗ್ತಾರೆ. ಅಲ್ಲಿಯೇ ಅವರ ವಾರವಿಡೀ ಓದು, ಬರಹ ನಡೆಯೋದು. ಈ ಶಾಲೆ ಕಾಲೇಜುಗಳೇನಿದ್ದರೂ ಕೇವಲ ಪರೀಕ್ಷೆ ಬರೆದು ಪಾಸಾಗೋಕೆ ಇರೋ ಜಾಗ ಅಷ್ಟೇ. ಒಟ್ಟಿನಲ್ಲಿ ಇಂದಿನ ವಿದ್ಯಾರ್ಥಿಗಳು, ಶಾಲೆ ಕಾಲೇಜಿನಾ ಮನೆ ತೊಳಿಯ, ಕೋಚಿಂಗ್ ಸೆಂಟರ್‌ಗಳೇ ಶಾಶ್ವತ ಗೆಳೆಯ ಅಂತ ಗಾಳಿಪಟ 2 ಚಿತ್ರದ ಧಾಟಿಯಲ್ಲಿ ಹಾಡ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಕತೆ ಹೇಳ್ತೀನಿ ಅಂದ್ರೆ

ಕೆಲವು ಕತೆಗಳು ನಮ್ಮನ್ನು ಗಾಢವಾಗಿ ಕಲಕುತ್ತವೆ. ಅಷ್ಟೇ ಅಲ್ಲ, ಯಾವತ್ತೂ ನೆನಪಿನ ಭಿತ್ತಿಯಲ್ಲಿ ಶಾಶ್ವತವಾಗಿ ನೆಲೆಸಿಬಿಡುತ್ತವೆ. ಅವು ಆಗಾಗ ನೆನಪಾಗಿ, ಸಣ್ಣ ಕಿರಿಕಿರಿ ಮಾಡುತ್ತವೆ. ಕತೆಯಾಗಿ ಅವು ಅಷ್ಟೂ ಮಾಡದಿದ್ದರೆ ಅವುಗಳಿಗೆ ಕತೆಗಳು ಅನ್ನುತ್ತಿದ್ದೇವಾ? ಇಲ್ಲ.. ಆ ಕಾರಣಗಳಿಂದ ಇಂದಿಗೂ ಕತೆಗಳು ನಮ್ಮ ಜೀವನದ ಒಂದು ಭಾಗವೇ ಈಗಿವೆ. 'ಒಂದು ಕತೆ ಹೇಳ್ತೀನಿ' ಅಂತ ಯಾರೇ ಹೇಳಿದರೂ, ಕೇಳೋಣ ಎನಿಸುತ್ತದೆ. ಈ ಕತೆಯನ್ನು ನಾನು ಎಲ್ಲಿ ಓದಿದ್ದು ಎಂಬುದು ನೆನಪಿಲ್ಲ. ಆದರೆ ಈ ಕತೆಯನ್ನು ಮಾತ್ರ ನಾನು ಮರೆತಿಲ್ಲ. ಕತೆಯನ್ನೊಮ್ಮೆ ಕೇಳಿದಾಗ ಮನಸ್ಸು ಆರ್ದ್ರವಾಗುತ್ತದೆ. ಆ ಕತೆ ಹೇಳ್ತೀನಿ, ಕೇಳಿ – ನಾನು ಆಗ ಟ್ಯಾಕ್ಸಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೆ. ಒಂದು ರಾತ್ರಿ ನನಗೆ ಫೋನ್ ಬಂತು. ನಾನು ಟಾಕ್ಸಿಯಲ್ಲಿ ನನಗೆ ಹೇಳಿದ ವಿಳಾಸಕ್ಕೆ ಹೋದೆ. ಅದೊಂದು ದೊಡ್ಡ ಮನೆ. ಒಂದು ಕೋಣೆಯಲ್ಲಿ ಮಾತ್ರ ದೀಪ ಉರಿಯುತ್ತಿತ್ತು. ಟ್ಯಾಕ್ಸಿ ಬಂದ ಸದ್ದು ಕೇಳಿ ಒಬ್ಬಾಕೆ ಹೊರ ಬಂದಳು. ನೋಡಿದರೆ ಸುಮಾರು ಎಂಬತ್ತೈದು ವರ್ಷದ ಹಣ್ಣು-ಹಣ್ಣು ಮುದುಕಿ. ಮದುಮಗಳಂತೆ ಸಿಂಗಾರ ಮಾಡಿಕೊಂಡಿದ್ದಳು. ತಲೆಗೆ ಹ್ಯಾಟ್ ಧರಿಸಿದ್ದಳು. ಮೈಗೆಲ್ಲಾ ಅತ್ತರು ಸಿಂಪಡಿಸಿಕೊಂಡು, ಮೇಕಪ್ ಮಾಡಿಕೊಂಡು ಲಕಲಕ ಅಂತ ಸಿದ್ಧಳಾಗಿದ್ದಳು. ಕೈಯಲ್ಲೊಂದು ಸೂಟ್ ಕೇಸ್ ಇತ್ತು. ನಾನು ಅವಳ ಸೂಟ್ ಕೇಸ್ ತೆಗೆದುಕೊಂಡು ಹೋಗಿ ಕಾರಲ್ಲಿಟ್ಟು ಬಂದೆ. ಕೈ ಹಿಡಿದು ಅವಳನ್ನು ಕಾರಿನಲ್ಲಿ ಕುಳ್ಳಿರಿಸಿದೆ. 'ಟ್ಯಾಕ್ಸಿ ಡ್ರೈವರುಗಳೂ ಒಳ್ಳೆಯವ ರಿರುತ್ತಾರೆ ಎಂದು ನನಗೆ ಅನೇಕ ಸಲ ಮನವರಿಕೆಯಾಗಿದೆ' ಎಂದಳು. ನಾನು ಏನೂ ಹೇಳಲಿಲ್ಲ. ಟ್ಯಾಕ್ಸಿಯನ್ನು ಸ್ಟಾರ್ಟ್ ಮಾಡಿದೆ. ಎಂ.ಜಿ. ರಸ್ತೆಗೆ ಹೋಗು ಎಂದಳು. ಈ ರಾತ್ರಿ ಅಲ್ಲಿಗೇಕೆ ಎಂದು ಕೇಳೋಣ ಎನಿಸಿತು. ಕೇಳಲಿಲ್ಲ. ಅವಳೇ ರೂಟ್ ಹೇಳಿದಳು. ಅದಕ್ಕೆ ನಾನು, 'ಆ ಮಾರ್ಗವಾಗಿ ಹೋಗುವುದು ಸುತ್ತು ಬಳಸಿದಂತೆ. ಅದಕ್ಕೂ ಸನಿಹದ ಮಾರ್ಗದಲ್ಲಿ ಕರೆದುಕೊಂಡು ಹೋಗುತ್ತೇನೆ' ಎಂದೆ. ಆಕೆ ಅದಕ್ಕೆ ಸಮ್ಮತಿಸಲಿಲ್ಲ. ತಾನು ಹೇಳಿದ ಮಾರ್ಗದಲ್ಲಿಯೇ ಹೋಗುವಂತೆ ತಿಳಿಸಿದಳು. ಆಗ ನಾನು ಮೀಟರನ್ನು ಸ್ವಿಚ್ ಆಫ್ ಮಾಡಿದೆ. 'ನೋಡಪ್ಪಾ, ನಾನು ಈ ಹೊತ್ತಿನಲ್ಲಿ ಯಾರನ್ನೂ ಭೇಟಿ ಮಾಡಬೇಕಿಲ್ಲ. ಅಷ್ಟಕ್ಕೂ ನನಗೆ ಯಾರೂ ಇಲ್ಲ' ಎಂದಳು. ಅವಳು ಕಣ್ಣನ್ನು ಒರೆಸಿಕೊಂಡಿದ್ದು ನನಗೆ ಕನ್ನಡಿಯಲ್ಲಿ ಕಾಣಿಸಿತು. ದಾರಿಯಲ್ಲಿ ಹೋಗುವಾಗ ಆಕೆ, 'ಇಲ್ಲೇ ನಾನು ರಿಸೆಪ್ಷನಿಸ್ಟ್ ಆಗಿದ್ದೆ.... ಈ ಮರದ ಕೆಳಗೆ ನಾನು ಮೊದಲ ಬಾರಿಗೆ ಅವರನ್ನು ನೋಡಿದ್ದು... ಇದೇ ಕಲ್ಯಾಣ ಮಂಟಪದಲ್ಲಿ ನನ್ನ ಮದುವೆಯಾಗಿದ್ದು... ಈ ರೆಸ್ಟೋರೆಂಟಿನಲ್ಲಿ ನಾವಿಬ್ಬರೂ ಅವೆಷ್ಟು ಸಲ ಕ್ಯಾಂಡಲ್ ಲೈಟ್ ಡಿನ್ನರ್ ಮಾಡಿದ್ದೇವೋ... ' ಎಂದು ತನ್ನಷ್ಟಕ್ಕೆ ಹೇಳುತ್ತಿದ್ದಳು. ನಾನು ಹೂಂ.. ಹೂಂ.. ಅನ್ನುತ್ತಿದ್ದೆ. ಸುಮಾರು ಎರಡು ತಾಸು ಅವಳನ್ನು ಸುತ್ತಿಸಿದ ಬಳಿಕ, 'ಸಾಕು, ಮನೆಗೆ ಹೋಗೋಣ. ನೀನು ಒಳ್ಳೆಯವನು, ನನಗೆ ಎಲ್ಲವನ್ನೂ ತೋರಿಸಿದೆ. ನನಗೆ ನನ್ನ ನೆನಪುಗಳನ್ನು ಭೇಟಿ ಮಾಡಿಸಿದೆ' ಎಂದಳು. ವಾಪಸ್ ಅವಳ ಮನೆಯ ಕಡೆ ಟ್ಯಾಕ್ಸಿ ಹೊರಟಿತು. ಮನೆ ತಲುಪುತ್ತಿದ್ದಂತೆ, ಅವಳ ಸೂಟ್ ಕೇಸನ್ನು ಇಳಿಸಿದೆ. ಅವಳಿಗಾಗಿ ಸಹಾಯಕಿ ಕಾಯುತ್ತಿದ್ದಳು. 'ಅಮ್ಮಾ, ಹೇಗಿತ್ತು ಟೂರ್?' ಎಂದು ಕೇಳಿದಳು. 'ಐವತ್ತು ವರ್ಷ ಸುತ್ತಿ, ಮನಸ್ಸು ತುಂಬಾ ನೆನಪುಗಳನ್ನು ಅರಳಿಸಿಕೊಂಡು, ಸುರಕ್ಷಿತವಾಗಿ ಮನೆಗೆ ಬಂದರೆ ಹೇಗಾಗಬಹುದು, ಹಾಗನಿಸುತ್ತಿದೆ. ನನಗೆ ಮಗ ಇದ್ದಿದ್ದರೆ ಈ ಡ್ರೈವರ್ ಮಾಡಿದ ಕೆಲಸವನ್ನು ಆತ ಮಾಡುತ್ತಿದ್ದನೇನೋ?' ಎಂದು ಹೇಳಿದಳು. ಆಕೆ ನನ್ನತ್ತ ತಿರುಗಿ, 'ಎಷ್ಟಾಯಿತು?' ಎಂದು ಕೇಳಿದಳು. 'ತಾಯಿಯಿಂದ ಮಗ ಹಣ ತೆಗೆದುಕೊಳ್ಳುವುದುಂಟಾ?' ಎಂದೆ. ಇಬ್ಬರ ಕಣ್ಣುಗಳಲ್ಲೂ ನೀರಾಡುತ್ತಿದವು. ಆ ಟ್ರಿಪ್ ನ್ನು ನಾನು ಮರೆಯುವಂತೆಯೇ ಇಲ್ಲ. ಅದು ನನ್ನ ಜೀವನದ ಬೆಸ್ಟ್ ಟ್ರಿಪ್ !

ಹೆಸರಿಗಾಗಿ ಕೊಲೆಯನ್ನು ಮಾಡಬಲ್ಲರು!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ
vveditoped@gmail.com

ಪ್ಯಾಂಕ್ರಿಯಾಸ್ ಗ್ರಂಥಿ, ಮನುಷ್ಯನ ಒಳಾಂಗಗಳಲ್ಲಿ ಒಂದು. ಗ್ರೀಕ್ ಭಾಷೆಯಲ್ಲಿ pankreas ಎಂದರೆ ಮಾಂಸಲವಾದದ್ದು ಎಂದರ್ಥ. ಪ್ರಾಣಿಗಳಲ್ಲಿರುವ ಪ್ಯಾಂಕ್ರಿಯಾಸ್ ಗ್ರಂಥಿಯು ಅತ್ಯಂತ ಮೃದುವಾದ ಹಾಗೂ ಸಿಹಿಯಾಗಿರುವ ಅಂಗ. ಮಧ್ಯಯುಗದ ಯೂರೋಪಿನ ಜನರು ಇದನ್ನು ತುಂಬಾ ಇಷ್ಟಪಟ್ಟು ತಿನ್ನುತ್ತಿದ್ದರು. ಹಾಗಾಗಿ ಇದನ್ನು-ಸಿಹಿರೊಟ್ಟಿ-ಸ್ವೀಟ್ ಬ್ರೆಡ್ ಎಂದು ಕರೆಯುತ್ತಿದ್ದರು. Pan = ಎಲ್ಲವೂ kreas = ಮಾಂಸದ ಹಾಗೆ ತುಂಬಿಕೊಂಡಿರುವಂತಹದ್ದು ಎಂದರ್ಥ. ಪ್ಯಾಂಕ್ರಿಯಾಸ್ ಶಬ್ದದ ವ್ಯುತ್ಪತ್ತಿಯನ್ನು ಆಧರಿಸಿ ಕನ್ನಡದಲ್ಲಿ ಮಾಂಸಲಿ ಮತ್ತು ಬಾಡಲಿ ಎನ್ನುವ ಸಮ ಪದಗಳನ್ನು ರೂಪಿಸುವ ಪ್ರಯತ್ನಗಳಲ್ಲಿ ನಡೆದಿವೆ. ಮೇದೋಜೀರಕಾಂಗ ಎನ್ನುವುದು ಸಾಕಷ್ಟು ಕಾಲದಿಂದಲೂ ಪ್ರಚಲಿತದಲ್ಲಿರುವ ಪದ. ಆದರೆ ಇದು ಪ್ಯಾಂಕ್ರಿಯಾಸ್ ಗ್ರಂಥಿಯ ಅರ್ಧ ಕೆಲಸವನ್ನು ಮಾತ್ರ ಸೂಚಿಸುತ್ತದೆ. ಪೂರ್ಣವಲ್ಲ. ಹಾಗಾಗಿ ಇದನ್ನು ಬಳಸದಿರುವುದು ಒಳ್ಳೆಯದು ಎಂಬ ಅಭಿಪ್ರಾಯವಿದೆ. ಹಾಗಾಗಿ ಸಧ್ಯಕ್ಕೆ ಪ್ಯಾಂಕ್ರಿಯಾಸ್ ಎನ್ನುವ ಹೆಸರನ್ನೇ ಕನ್ನಡದಲ್ಲಿಯೂ ಉಳಿಸಿಕೊಳ್ಳಬಹುದು.

ಪ್ಯಾಂಕ್ರಿಯಾಸ್ ಒಂದು ಉಭಯ ಗ್ರಂಥಿ. ಅಂದರೆ ಒಂದು ಅಂಗವೇ ಎರಡು ಭಿನ್ನವಾದ ಕೆಲಸಗಳನ್ನು ಮಾಡುತ್ತದೆ ಎಂದರ್ಥ. ಇದರ ಮೊದಲನೆಯ ಕೆಲಸ, ನಾವು ಸೇವಿಸಿದ ಆಹಾರ ಪದಾರ್ಥಗಳು ಜೀರ್ಣವಾಗಲು ಅಗತ್ಯವಾದ ಕಿಣ್ವಗಳನ್ನು ಉತ್ಪಾದಿಸಿ ಬಿಡುಗಡೆ ಮಾಡುವುದು. ಟ್ರಿಪ್ಸಿನ್ ಕಿಣ್ವವು ಪ್ರೋಟೀನ್ ಜೀರ್ಣಕ್ರಿಯೆಯಲ್ಲಿ ಭಾಗವಹಿಸುತ್ತದೆ. ಲೈಪೇಸ್, ಫಾಸ್ಫೋಲೈಪೇಸ್ ಎ2, ಲೈಸೋಫಾಸ್ಫೋಲೈಪೇಸ್, ಕೊಲೆಸ್ಟೆರಾಲ್ ಎಸ್ಟೆರೇಸ್ ಮುಂತಾದ ಕಿಣ್ವಗಳು ಮೇದಸ್ಸನ್ನು ಜೀರ್ಣಿಸಲು ನೆರವಾಗುತ್ತವೆ (ಹಾಗಾಗಿ ಇದನ್ನು ಮೇದೋಜೀರಕಾಂಗ ಎಂದು ಕರೆದರು) ಅಮೈಲೇಸ್ ಎನ್ನುವ ಕಿಣ್ವವು ಕಾರ್ಬೋಹೈಡ್ರೇಟನ್ನು ಜೀರ್ಣಿಸುತ್ತದೆ. ಪ್ಯಾಂಕ್ರಿಯಾಸ್ ಈ ಎಲ್ಲ ಕಿಣ್ವಗಳನ್ನು ಉತ್ಪಾದಿಸಿ, ಅವನ್ನು ಒಂದು ನಾಳದ ಮೂಲಕ ಸಣ್ಣಕರುಳಿನ ದ್ವಾದಶಾಂತ್ರ ಅಥವ ಡುಯೋಡಿನಮ್ ಎಂಬ ಭಾಗದಲ್ಲಿ ಸುರಿಸುತ್ತದೆ. ಹಾಗಾಗಿ ಇದನ್ನು ನಾಳಸಹಿತ ಗ್ರಂಥಿ ಎನ್ನುವರು. 1889ರಲ್ಲಿ ಆಸ್ಕರ್ ಮಿಂಕೋವ್‌ಸ್ಕಿ (1858-1931) ಎನ್ನುವ ಜರ್ಮನ್ ವೈದ್ಯನು ನಾಯಿಗಳ ದೇಹದಲ್ಲಿದ್ದ ಪ್ಯಾಂಕ್ರಿಯಾಸ್ ಗ್ರಂಥಿಯನ್ನು ಛೇದಿಸಿದ. ಆಗ ಆ ನಾಯಿಯಲ್ಲಿ ಮಧುಮೇಹವು ಕಾಣಿಸಿಕೊಂಡಿತು. ಹಾಗಾಗಿ ಮಧುಮೇಹಕ್ಕೂ ಪ್ಯಾಂಕ್ರಿಯಾಸ್ ಗ್ರಂಥಿಗೂ ಸಂಬಂಧವಿರಬೇಕೆಂದು ತರ್ಕಿಸಿದ. ಕೊನೆಗೆ 1921ರಲ್ಲಿ ಫ್ರೆಡ್ರಿಕ್ ಗ್ರಾಂಟ್ ಬ್ಯಾಂಟಿಂಗ್ (1891-1941) ಮತ್ತು ಚಾರ್ಲ್ಸ್ ಹರ್ಬರ್ಟ್ ಬೆಸ್ಟ್ (1899-1978) ಇಬ್ಬರೂ ಸೇರಿ, ಪ್ಯಾಂಕ್ರಿಯಾಸ್ ಗ್ರಂಥಿಯು ಇನ್ಸುಲಿನ್ ಎಂಬ ಹಾರ್ಮೋನನ್ನು ಉತ್ಪಾದಿಸುತ್ತದೆ, ಅದು ಗ್ಲೂಕೋಸ್ ಉಪಾಪಚಯದಲ್ಲಿ ಪಾಲುಗೊಳ್ಳುತ್ತದೆ. ಶರೀರವು ಇನ್ಸುಲಿನ್ ಕೊರತೆಯ ಕಾರಣ ಅಥವಾ ಬಳಸಿಕೊಳ್ಳಲಾಗದ ಅಸಹಾಯಕತೆಯ ಕಾರಣ ಮಧುಮೇಹವು ತಲೆದೋರುತ್ತದೆ ಎನ್ನುವುದನ್ನು ಪ್ರಕಟಿಸಿದರು. ಪ್ಯಾಂಕ್ರಿಯಾಸ್ ತನ್ನ ಇನ್ಸುಲಿನ್ ಉತ್ಪಾದನೆಯನ್ನು ಯಾವುದೇ ನಾಳದ ಮೂಲಕ ಹರಿಸದೇ, ನೇರವಾಗಿ ರಕ್ತನಾಳದೊಳಗೆ ಬೆರೆಸುತ್ತದೆ. ಹಾಗಾಗಿ ಇದನ್ನು ನಿರ್ನಾಳ ಗ್ರಂಥಿ ಎಂದೂ ಕರೆಯುವರು. ಹೀಗೆ ಪ್ಯಾಂಕ್ರಿಯಾಸ್ ನಾಳಸಹಿತ ಹಾಗೂ ನಾಳರಹಿತ ಉಭಯಗ್ರಂಥಿಯಾಗಿದೆ.

ಪ್ಯಾಂಕ್ರಿಯಾಸ್ ಎಂಬ ಒಳಾಂಗದ ಭಾಗವನ್ನು ಮೊದಲ ಬಾರಿಗೆ ಗಮನಿಸಿದವನು ಗ್ರೀಕ್ ದೇಶದ ಚಾಲ್ಸಿಡಾನ್ ಎಂಬಲ್ಲಿ ವಾಸಿಸುತ್ತಿದ್ದ ಹೆರೋಫಿಲಸ್ (ಕ್ರಿ.ಪೂ.335-ಕ್ರಿ.ಪೂ.280) ಎಂಬ ಅಂಗರಚನ ವಿಜ್ಞಾನಿ ಹಾಗೂ ಶಸ್ತ್ರವೈದ್ಯ. ಬಹುಶಃ ಮನುಷ್ಯನ ಶರೀರವನ್ನು ಸಾರ್ವಜನಿಕವಾಗಿ ವಿಚ್ಛೇದಿಸಿದವರಲ್ಲಿ ಈತನೇ ಮೊದಲಿಗ ಎನ್ನಬಹುದು. ಹೆರೋಫಿಲಸ್ ಈ ಅಂಗವನ್ನು ಗುರುತಿಸಿದನೇ ಹೊರತು, ಇದಕ್ಕೆ ಒಂದನ್ನು ಹೆಸರನ್ನು ನೀಡುವ ಅಥವ ಇದರ ಕೆಲಸವನ್ನು ಅರಿಯುವ ಪ್ರಯತ್ನವನ್ನು ಮಾಡಲಿಲ್ಲ. ಹೆರೋಫಿಲಸ್ ನಂತರ, ಸುಮಾರು 400 ವರ್ಷಗಳಾದ ಮೇಲೆ ಗ್ರೀಸ್ ದೇಶದ ಈಫಿಸಸ್ ಎಂಬಲ್ಲಿ ವಾಸಮಾಡುತ್ತಿದ್ದ ರೂಫಸ್ (ಕ್ರಿ.ಶ.1-2ನೆಯ ಶತಮಾನ) ಎಂಬ ಅಂಗರಚನ ವಿಜ್ಞಾನಿಯು ಅತ್ಯಂತ ಮೃದುವಾಗಿದ್ದ ಈ ಅಂಗವನ್ನು, ಮಾಂಸಲವಾಗಿದೆ ಎನ್ನುವ ಅರ್ಥದಲ್ಲಿ ಪ್ಯಾಂಕ್ರಿಯಾಸ್ ಎಂದು ನಾಮಕರಣವನ್ನು ಮಾಡಿದ. ರೋಮಿನ ಕ್ಲಾಡಿಯಸ್ ಗ್ಯಾಲನಸ್ ಅಥವ ಗ್ಯಾಲನ್ (129-216) ಪ್ಯಾಂಕ್ರಿಯಾಸ್ ಗ್ರಂಥಿಯನ್ನು ಒಂದು ಮೃದು ತಲ್ಪ ಎಂದ. ಜಠರ ಮತ್ತು ಪ್ರಧಾನ ರಕ್ತನಾಳಗಳಿಗೆ ಆಘಾತವಾಗದ ಹಾಗೆ ರಕ್ಷಿಸುವ ಹಾಸಿಗೆಯಂತಹ ರಚನೆ ಎಂಬ ವಿವರಣೆಯನ್ನು ನೀಡಿದ. ಈತನ ವಿವರಣೆಯನ್ನು, ಸುಮಾರು 1200 ವರ್ಷಗಳ ಕಾಲ, ಎಲ್ಲ ವೈದ್ಯರೂ ಕಮಕ್-ಕಿಮಕ್ ಎನ್ನದೆ ಒಪ್ಪಿಕೊಂಡಿದ್ದರು! ಪ್ಯಾಂಕ್ರಿಯಾಸ್ ಗ್ರಂಥಿಯ ಬಗ್ಗೆ ಗಂಭೀರ